# ಮಲ್ಲಿಗೆ ಫೇಸ್‌ಪ್ಯಾಕ್

**ವಿಶಿಷ್ಟ ಘಮಲಿಗೆ ಹೆಸರಾದ ಮಲ್ಲಿಗೆ ಹೂವು ಮುಡಿಯಲು, ಅಲಂಕಾರಕ್ಕೆ, ಪೂಜೆ ಪುನಸ್ಕಾರಕ್ಕಷ್ಟೇ ಬಳಕೆಯಾಗುವುದಲ್ಲ. ಮಲ್ಲಿಗೆ ಒಂದು ಒಳ್ಳೆಯ ಸೌಂದರ್ಯವರ್ಧಕವಾಗಿಯೂ ಉಪಯೋಗಕ್ಕೆ ಬರುತ್ತದೆ. ಮಲ್ಲಿಗೆ ಫೇಸ್‌ಪ್ಯಾಕ್‌ನಿಂದ ಮುಖದ ತ್ವಚೆ ಕಾಂತಿಯುಕ್ತವಾಗುತ್ತದೆ. ಇದು ಚರ್ಮದ ಆರೋಗ್ಯಕ್ಕೂ ಒಳ್ಳೆಯದು.**

**■ ಉಮಾ ವೇಣೂರು**



ಮಲ್ಲಿಗೆ ಹೂವು ತನ್ನ ಅಂದ ಮತ್ತು ಘಮಲಿನಿಂದ ಹೂವುಗಳಲ್ಲೆಲ್ಲ ಮೇಲ್ಪಂಕ್ತಿ ಹಾಕುತ್ತಿದೆ. ಪುಷ್ಪೋದ್ಯಮದಲ್ಲೂ ಮಲ್ಲಿಗೆ ಲಾಭದಾಯಕ ಎಂಬುದು ಹೂವುಗಳ ದರಪಟ್ಟಿ ನೋಡಿದಾಗಲೇ ಸಾಬೀತಾಗುತ್ತದೆ.

ಬಹೂಪಯೋಗಿಯಾಗಿರುವ ಮಲ್ಲಿಗೆ ಉತ್ತಮ ಸೌಂದರ್ಯವರ್ಧಕವೂ ಹೌದು. ಮಲ್ಲಿಗೆಯ ಫೇಸ್‌ಪ್ಯಾಕ್ ನೈಸರ್ಗಿಕವಾಗಿ ಸೌಂದರ್ಯಪ್ರಿಯರ ಸಂಗಾತಿಯಾಗಿ ಇತ್ತೀಚೆಗೆ ಹೆಚ್ಚು ಹೆಚ್ಚು ಜನಪ್ರಿಯತೆ ಗಳಿಸುತ್ತಿದೆ. ಹೀಗಾಗಿ ಹರ್ಬಲ್ ಬ್ಯೂಟಿ ಪಾರ್ಲರ್‌ಗಳಲ್ಲಿ 'ಮಲ್ಲಿಗೆಯ ಫೇಸ್‌ಪ್ಯಾಕ್'ಗೆ ಹೆಚ್ಚಿನ ಬೇಡಿಕೆಯೂ ಬಂದಿದೆ.

ಸೌಂದರ್ಯವರ್ಧನೆಯಲ್ಲಿ ಮಲ್ಲಿಗೆಯ ಪಾತ್ರ ಅಪಾರ. ಮಲ್ಲಿಗೆಯಲ್ಲಿ ಹಲವು ವಿಧ.. ದುಂಡುಮಲ್ಲಿಗೆ, ಕಾಡು ಮಲ್ಲಿಗೆ, ಮೈಸೂರು ಮಲ್ಲಿಗೆ, ಸೂಜಿಮಲ್ಲಿಗೆ, ಜಾಜಿಮಲ್ಲಿಗೆ, ಮಂಗಳೂರು ಮಲ್ಲಿಗೆ, ಮುತ್ತು ಮಲ್ಲಿಗೆ... ಹೀಗೆ..

ಮಲ್ಲಿಗೆಯನ್ನು ಸುಗಂಧಿತ ತೈಲ ಮತ್ತು ಸುಗಂಧ ದ್ರವ್ಯ ತಯಾರಿಸಲು ಬಳಸಲಾಗುತ್ತದೆ. ಮಲ್ಲಿಗೆಯ ತೈಲವನ್ನು ಸಾಬೂನು ಮತ್ತು ಇತರ ಸೌಂದರ್ಯವರ್ಧಕ ಸಾಧನಗಳ ತಯಾರಿಕೆಯಲ್ಲಿ ಬಳಸಲಾಗುತ್ತದೆ. ಬಹುತೇಕ ಎಲ್ಲ ಸುಗಂಧ ದ್ರವ್ಯಗಳಲ್ಲಿಯೂ ಮಲ್ಲಿಗೆಯ ಘಮಘಮವೇ ತುಂಬಿರುತ್ತದೆ.

ಜಾಜಿಮಲ್ಲಿಗೆ ವಿಶಿಷ್ಟ ಕಂಪು ನೀಡುವ ಮಲ್ಲಿಗೆಯ ವಿಧ. ಸಂಜೆಹೊತ್ತು ರಾಣಿಯಂತೆ ಘಮಲು ಬೀರುತ್ತಾ ಸುಂದರವಾಗಿ ಅರಳಿ ಸುಗಂಧ ಬೀರುವ ಜಾಜಿ

